# ‘ದೊಡ್ಡವಳಾದ’ ಸುಗಂಧಾಗೆ ಹೊಸ ಲೋಕದ ಅನಾವರಣ

ಸುಗಂಧಾ, ನೀನು ನನ್ನೊಂದಿಗೆ ಇರಲು ಇಷ್ಟಪಡ್ತಿಯೊ ಅಥವಾ ಅಪ್ಪನೊಂದಿಗೋ ಎಂದು ಅಮ್ಮ ಕೇಳಿದಾಗ ಸುಗಂಧಾ, ‘ಅಮ್ಮಾ, ನಾನು ಸದಾ ನಿಮ್ಮ ಜೊತೆಯಲ್ಲೇ ಇರ್ತೀನಿ! ಆದ್ರೆ ಇದನ್ನು ಏಕೆ ಕೇಳ್ತಿದ್ದೀರ?’

‘ನಾನು ನಿಮ್ಮ ಅಪ್ಪನಿಂದ ವಿಚ್ಛೇದನ ಪಡೆಯುತ್ತಿದ್ದೇನೆ. ಅವರು ವಿಚ್ಛೇದನ ಕೊಡಲು ಒಪ್ತಿಲ್ಲ, ಅದ್ರೆ ನಾನು ಅವರಿಗೆ ವಿಚ್ಛೇದನ ಕೊಡ್ತಿದ್ದೇನೆ. ಅವರು ನನ್ನನ್ನು ತಮ್ಮೊಂದಿಗಿರಲು ಸಹ ಬಿಡಲ್ಲ, ನನಗೆ ವಿಚ್ಛೇದನ ಸಹ ಕೊಡಲ್ಲ ಅಂದ್ರೇನು? ಅವರು ನನ್ನನ್ನು ಏನಂತ ತಿಳ್ಕೊಂಡಿದ್ದಾರೆ?’ ಅಮ್ಮ ಭಾವನೆಗೊಳಗಾಗಿ ಹೇಳುತ್ತಿದ್ದರು, ‘ಸುಗಂಧಾ, ಕೇಳು! ವಿಚ್ಛೇದನದ ಸಮಯದಲ್ಲಿ ಕೋರ್ಟು ನಿನ್ನನ್ನು ಸಹ, ‘ನೀನು ನಿಮ್ಮ ತಂದೆಯೊಂದಿಗಿರ್ತೀಯೋ, ತಾಯಿಯೊಂದಿಗಿರ್ತೀಯೋ?’ ಅಂತ ಕೇಳುತ್ತೆ. ನೀನೆಲ್ಲಿರೋದಕ್ಕೆ ಇಷ್ಟಪಡ್ತೀಯ, ಹೇಳು. ನಾನು ನಿನಗೆ ಬೇಜಾರು ಮಾಡಲ್ಲ.’

‘ನಾನು ಸದಾ ನಿಮ್ಮೊಂದಿಗಿರ್ತೀನಿ’, ನಾನು ನನ್ನ ಉತ್ತರವನ್ನು ಪುನರುಚ್ಚರಿಸಿದ್ದೆ. ನನ್ನ ಉತ್ತರದಿಂದ ಅಮ್ಮನ ಮುಖ ಅರಳಿತ್ತು.

ನನಗೆ ಅದುವರೆಗೆ ‘ವಿಚ್ಛೇದನ’ ಅಂದರೆ ಏನು, ಇದನ್ನು ಅಮ್ಮ ಹೇಗೆ ತೆಗೆದುಕೊಳ್ಳುತ್ತಾರೆಂದು ತಿಳಿದಿರಲಿಲ್ಲ. ಆದರೆ ವಿಚ್ಛೇದನ ಪಡೆದ ನಂತರ ನಾನು ಸದಾ ಅಮ್ಮನೊಂದಿಗಿರಬೇಕು ಎಂದು ಖಂಡಿತ ತಿಳಿದಿತ್ತು. ನಾನು ಬಹುಶಃ ಅಪ್ಪನನ್ನು ಎಂದೂ ಭೇಟಿಯಾಗಲಾರೆ. ಇದರಿಂದ ನನಗೇನೂ ಅನ್ನಿಸಲಿಲ್ಲ. ಅಪ್ಪ ನನ್ನ ಬಳಿ ಎಂದೂ ಇರಲಿಲ್ಲ. ಅವರು ತಮ್ಮ ಕೋಣೆಯಲ್ಲಿ ತಮ್ಮ ಕೆಲಸದಲ್ಲಿ ಮಗ್ನರಾಗಿರುತ್ತಿದ್ದರು. ಮನೆಯ ಹೊರಗೂ ವ್ಯಸ್ತರಾಗಿರುತ್ತಿದ್ದರು. ಅವರು ನನ್ನನ್ನು ಮತ್ತು ಅಮ್ಮನನ್ನು ಹೊರಗೆ ಕರೆದುಕೊಂಡು ಹೋಗಿದ್ದು ತುಂಬಾ ವಿರಳ. ಅಮ್ಮನೇ ನನ್ನನ್ನು ಅಲ್ಲಿ ಇಲ್ಲಿಗೆ ಕರೆದುಕೊಂಡು ಹೋಗುತ್ತಿದ್ದರು. ಅಮ್ಮನೇ ನನಗೆ ಕಾಪಿ, ಪೆನ್ಸಿಲ್, ರಬ್ಬರ್ ಮತ್ತು ಕಂಪಾಸ್ ಮುಂತಾದವುಗಳನ್ನು ಕೊಂಡು ಕೊಡುತ್ತಿದ್ದರು, ಆಗ ಅಮ್ಮ ಅಪ್ಪನಿಂದಲೇ ದುಡ್ಡನ್ನು ಪಡೆಯುತ್ತಿದ್ದಳು. ಭೋಪಾಲ್‌ಗೆ ಬಂದ ನಂತರ ಅಮ್ಮ ತಮ್ಮ ದುಡ್ಡಿನಿಂದ ನನಗೆ ಬೇಕಾದುದ್ದನ್ನು ಕೊಳ್ಳುತ್ತಿದ್ದರು.

ನನಗೆ ಕೋರ್ಟ್ ಎಂದರೇನು ಎಂಬುದು ಅದುವರೆಗೂ ತಿಳಿದಿರಲಿಲ್ಲ. ನಾನು ಅದುವರೆಗೆ ಹಿಂದಿ ಸಿನಿಮಾಗಳನ್ನು ತುಂಬಾ ಕಡಿಮೆ ನೋಡಿದ್ದೆ. ನಾನು ನೋಡಿದ ಸಿನಿಮಾಗಳಲ್ಲಿ ಕೆಲವು ಕೋರ್ಟ್‌ನ ದೃಶ್ಯಗಳಿದ್ದವು. ಕಪ್ಪು ಕೋಟ್ ಧರಿಸಿದ ದಢೂತಿ ಮತ್ತು ಬೋಳು ವ್ಯಕ್ತಿಯೊಬ್ಬರು, ಕಪ್ಪು ಕೋಟು ಧರಿಸಿದ ಇಬ್ಬರು ವಕೀಲರು ಮತ್ತು ಕಟಕಟೆಯಲ್ಲಿ ನಿಂತು ನ್ಯಾಯವನ್ನು ಯಾಚಿಸುವ ನಾಯಕ ಮತ್ತು ಇನ್ನೊಂದು ಕಟಕಟೆಯಲ್ಲಿ ದುಃಖಿಗೊಂಡ, ಅಸಹಾಯಕ ನಾಯಕಿ ಹಾಗೂ ಮಧ್ಯೆಮಧ್ಯೆ ವ್ಯಂಗ್ಯದ ಮಾತುಗಳಿಗೆ ನಗೆ ಸೂಸುವ ಅಲ್ಲಿ ಕಲೆತಿದ್ದ ಜನರು... ಅಪ್ಪನನ್ನು ಇಂಥ ಒಂದು ಕೋರ್ಟಿನ ಕಟಕಟೆಯಲ್ಲಿ ನಿಲ್ಲಿಸಲಾಗುವುದೇ? ಅಲ್ಲಿ ನಿಂತ ಅಮ್ಮ ಸಹ ದುಃಖಿಗೊಂಡವರಂತೆ ಮತ್ತು ಅಸಹಾಯಕರಂತೆ ಕಾಣಬರುವರೇ? ಈ ಬಗ್ಗೆ ನಾನು ನನ್ನ ಕಲ್ಪನಾಶಕ್ತಿಯ ಕುದುರೆಯನ್ನು ಓಡಿಸುತ್ತಾ, ದಣಿಯುತ್ತಿದ್ದೆ, ನಂತರ ದಣಿದು ಶಾಂತಳಾಗುತ್ತಿದ್ದೆ. ಕೋರ್ಟಿನ ಸಂವಾದಗಳಿಗೆ ನಾನು ತುಂಬಾ ಚಿಕ್ಕವಳಾಗಿದ್ದೆ, ನನಗೆ ಆ ಸಿನಿಮಾದ ಕೋರ್ಟಿನ ಸಂವಾದಗಳು ನೆನಪಿರಲಿಲ್ಲ. ದೃಶ್ಯಗಳು ಮಾತ್ರ ನೆನಪಿದ್ದವು. ನಾಯಕನಾಯಕಿಯೊಂದಿಗೆ ಹಾಡು ಹೇಳುವುದು ಮತ್ತು ಹಾಸ್ಯ ನಟನ ಅಭಿನಯದ ಆ ವಿಚಿತ್ರ ದೃಶ್ಯಗಳು.

‘ಸುಗಂಧಾ! ಇವತ್ತು ರಾತ್ರಿಯ ರೈಲಿನಿಂದ ನಾನು ಹೊರಗೆ ಹೋಗ್ಬೇಕು, ನಿನ್ನ ಬಟ್ಟೆಪುಸ್ತಕಗಳನ್ನು ತೆಗೆದುಕೋ, ನಿನ್ನನ್ನು ನೂತನ್ ಸೋದರತ್ತೆಯವರ ಮನೆಯಲ್ಲಿ ಬಿಟ್ಟು, ಅಲ್ಲಿಂದಲೇ ಹೋಗ್ತೀನಿ’, ಅಮ್ಮ ಅಂದು ಕಚೇರಿಯಿಂದ ಮರಳಿ ಬಂದು ಹೇಳಿದರು.

‘ಅಮ್ಮಾ, ನೀವೆಲ್ಲಿಗೆ ಹೋಗ್ಬೇಕು?’ ಕೇಳಿದೆ.

‘ನಾಳೆ ಹಿಯರಿಂಗ್ ಇದೆ, ಅದೇ ವಿಚ್ಛೇದನಕ್ಕೆ ಸಂಬಂಧಿಸಿದ್ದು’ ಎಂದರು ಅಮ್ಮ. ಅಮ್ಮ ಅಪ್ಪನ ಬಳಿಗೆ ಹೋಗುತ್ತಿದ್ದಾರೆ ಎಂದು ತಿಳಿದೆ... ಇಲ್ಲ, ಅಪ್ಪ ಇದ್ದ ನಗರಕ್ಕೆ ಹೋಗುತ್ತಿದ್ದಾರೆ, ಅವರ ಬಳಿಗಲ್ಲ. ಅಮ್ಮನ ಒಂದು ವಿಷಯ ನನಗೆ ತುಂಬಾ ಇಷ್ಟವಾಗುತ್ತಿತ್ತು; ಅವರು ನನ್ನಲ್ಲಿ ಯಾವುದನ್ನೂ ಮುಚ್ಚುಮರೆ ಮಾಡುತ್ತಿರಲಿಲ್ಲ, ಅದು ನನಗೆ ಅರ್ಥವಾಗಲಿ ಅಥವಾ ಆಗದಿರಲಿ. ನಾನು ಆದಷ್ಟು ಬೇಗನೆ ಜೀವನದ ವಾಸ್ತವಿಕತೆಗಳನ್ನು ಅರಿಯಬೇಕು, ನನ್ನ ಒಳಿತುಕೆಡುಕುಗಳನ್ನು ನಿರ್ಧರಿಸುವ ಸಾಮರ್ಥ್ಯವನ್ನು ನಾನೇ ಪಡೆಯಬೇಕು ಎಂದು ಬಹುಶಃ ಅಮ್ಮ ಬಯಸುತ್ತಿದ್ದಳು. ನನ್ನ ಅಮ್ಮ ವಾಸ್ತವಿಕವಾಗಿಯೂ ತಿಳಿವಳಿಕಸ್ಥೆಯಾಗಿದ್ದು, ಸಂವೇದನೆಯುಳ್ಳವರಾಗಿದ್ದರು.

ನಾನು ಕೂಡಲೇ ನನ್ನ ಎರಡು ಬಟ್ಟೆಗಳು, ಒಂದು ಸ್ಕೂಲ್ ಡ್ರೆಸ್ ಮತ್ತು ರಾತ್ರಿ ಮಲಗುವ ಸ್ಕರ್ಟ್ ಬ್ಲೌಸ್‌ಗಳನ್ನು ಒಂದು ಚೀಲದಲ್ಲಿಟ್ಟುಕೊಂಡೆ, ನನ್ನ ಶಾಲೆಯ ಬ್ಯಾಗನ್ನು ಸಹ ತೆಗೆದುಕೊಂಡೆ. ಮರುದಿನ ನಾನು ನೂತನ್ ಸೋದರತ್ತೆಯವರ ಮನೆಯಿಂದಲೇ ಶಾಲೆಗೆ ಹೋಗಬೇಕಾಗುವುದು. ಅಮ್ಮ ನನ್ನ ಲಗ್ಗೇಜುಗಳನ್ನು ಎತ್ತಿಕೊಳ್ಳುವಾಗ ನನ್ನ ಚೀಲದಲ್ಲಿ ಒಂದು ಬಿಸ್ಕತ್‌ಪ್ಯಾಕನ್ನು ಸಹ ಹಾಕಿದರು.

‘ಒಂದು ವೇಳೆ ಸೋದರತ್ತೆ ಕಚೇರಿಯಿಂದ ಬರಲು ತಡವಾದರೆ, ಹಾಗೂ ಅದೇ ವೇಳೆಗೆ ಹಸಿವೆಯಾದರೆ, ನೀನಿದನ್ನು ತಿನ್ನುವುದು’ ಎಂದರು ಅಮ್ಮ, ನಂತರ ನನಗೆ ತಿಳಿಯಪಡಿಸುತ್ತಾ ಹೇಳಿದರು, ‘ನಿನಗೆ ಮೋಹನನ ಭಯವಿಲ್ಲದಿದ್ದರೆ ನಿನ್ನನ್ನು ನೂತನ್ ಸೋದರತ್ತೆ ಮನೆಗೆ ಕರೆದೊಯ್ಯುತ್ತಿರಲಿಲ್ಲ. ಹೋಗ್ಲಿ, ನಾನು ಬೇರೆ ಮನೆ ನೋಡ್ತಿದ್ದೇನೆ, ಬೇಗನೆ ಸಿಗುತ್ತೆ.’ ನಂತರ ಅಮ್ಮ ಬಡಬಡಿಸಿದರು, ‘ಒಂಟಿ ಹೆಣ್ಣನ್ನು ಇಟ್ಟುಕೊಳ್ಳುವವರು ಬೇಕಾದಷ್ಟು ಜನ ಸಿಕ್ತಾರೆ, ಆದರೆ ಮನೆ ಕೊಡೋರು ಯಾರೂ ಸಿಗಲ್ಲ’.

ಅಮ್ಮನ ಈ ಮಾತು ಆಗ ನನಗೆ ಅರ್ಥವಾಗಿರಲಿಲ್ಲ. ಆದರೂ ನನಗೆ ಬಿಡಿಸಲಾಗದ ಒಗಟಿನಂತೆ ನೆನಪಾಗುತ್ತಿತ್ತು.

ಅಮ್ಮ ನನ್ನನ್ನು ನೂತನ್ ಸೋದರತ್ತೆಯ ಮನೆಗೆ ಬಿಟ್ಟರು. ಅವರು ಅಡುಗೆ ಮನೆಯಲ್ಲಿ ನೂತನ್ ಸೋದರತ್ತೆಯೊಂದಿಗೆ ಕೆಲವು ವಿಶೇಷ ಚರ್ಚೆಯನ್ನು ಮಾಡಿದರು. ಬಹುಶಃ ನಾನು ಆ ವಿಷಯಗಳನ್ನು ತಿಳಿಯಲು ಸಾಧ್ಯವಿರಲಿಲ್ಲ. ಇಬ್ಬರು ಮಹಿಳೆಯರ ನಡುವಿನ ಗೋಪ್ಯದ ಚರ್ಚೆ ನನ್ನಂಥ ಅಲ್ಪ ವಯಸ್ಸಿನ ಹುಡುಗಿಗೆ ಯೋಗ್ಯವಾಗಿರಲಿಲ್ಲ ಎಂದು ನನಗೆ ಅನ್ನಿಸಿತು.

ಅಂದು ರಾತ್ರಿ ಅಮ್ಮ ನನ್ನನ್ನು ನೂತನ್ ಸೋದರತ್ತೆಯವರ ಮನೆಯಲ್ಲಿ ಬಿಟ್ಟು ಹೋದರು. ನೂತನ್ ಸೋದರತ್ತೆ ನನಗೆ, ‘ನೀನು ನನ್ನೊಂದಿಗೆ ಮಂಚದಲ್ಲಿ ಮಲಗು’ ಎಂದರು. ಅವರ ಪತಿ ಟೂರ್ ಹೋಗಿದ್ದರು. ನೂತನ್ ಸೋದರತ್ತೆ ಮನೆಯಲ್ಲಿ ಒಂಟಿಯಾಗಿದ್ದರು. ನನಗೂ ಅವರೊಂದಿಗೆ ಮಲಗಲು ಸಂಕೋಚವಿರಲಿಲ್ಲ. ಮೊದಲು ನಾನು ಅಮ್ಮನೊಂದಿಗೆ ಮಲಗುತ್ತಿದ್ದೆ. ಅಮ್ಮ ಫೋಲ್ಡಿಂಗ್ ಮಂಚ ತಂದಾಗಿನಿಂದ ನಾವು ಬೇರೆ ಬೇರೆ ಮಲಗಲಾರಂಭಿಸಿದೆವು. ನಾನು ಮಂಚದ ಮೇಲೆ ಮಲಗದೆ ಅನೇಕ ತಿಂಗಳುಗಳೇ ಕಳೆದಿದ್ದವು, ಹೀಗಾಗಿ ಅವರ ಆಗ್ರಹ ನನಗೆ ಇಷ್ಟವಾಯಿತು. ಅವರ ಮೆತ್ತನೆಯ ದೊಡ್ಡ ಮಂಚ ನನ್ನನ್ನು ಆಕರ್ಷಿಸುತ್ತಿತ್ತು. ನಾನು ಅದರ ಮೇಲೆ ಮಲಗಲು ಬಯಸುತ್ತಿದ್ದೆ, ಕುಣಿಯಲು ಬಯಸುತ್ತಿದ್ದೆ, ಬಾಲ್ಯದಲ್ಲಿ ನಾನು ಅಪ್ಪನ ಮನೆಯಲ್ಲಿ ಹೀಗೆಯೇ ಮಾಡುತ್ತಿದ್ದೆ.

ಅಂದು ರಾತ್ರಿ ಅಮ್ಮ ಹೊರಟು ಹೋದ ನಂತರ ನನ್ನ ಉಳಿದ ಹೋಮ್‌ವರ್ಕ್ ಮುಗಿಸಿದೆ. ನಂತರ ಬಟ್ಟೆ ಬದಲಿಸಲು ಬಚ್ಚಲು ಮನೆಗೆ ಹೋದೆ. ಬಟ್ಟೆ ಬದಲಿಸಿ ಬಂದಾಗ ನೂತನ್ ಸೋದರತ್ತೆಯವರು ಹೇಳಿದರು, ‘ಬಾ, ಹಾಸಿಗೆಯಲ್ಲಿ ಮಲಗೋಣ’.

ಹೀಗೆಂದು ಅವರು ನನ್ನ ಬೆನ್ನ ಮೇಲೆ ಮೆಲ್ಲನೆ ಹೊಡೆದರು. ನಾನು ಮುಗುಳ್ನಕ್ಕೆ. ಆಗ ನನ್ನ ಕೈಯಲ್ಲಿ ನನ್ನ ಫ್ರಾಕ್ ಇತ್ತು.

‘ಕೊಡು, ಈ ಕಡೆ ಇಡ್ತೀನಿ’, ಸೋದರತ್ತೆಯವರು ನನ್ನ ಕೈಯಿಂದ ಫ್ರಾಕ್ ತೆಗೆದುಕೊಂಡರು.

‘ನೀನು ಬ್ರಾ ಹಾಕಲ್ವ?’

‘ಇಲ್ಲ’ ನಾನು ಇಲ್ಲವೆಂಬಂತೆ ತಲೆಯಾಡಿಸಿದೆ. ನಾನು ನಾಚಿಕೆಯಿಂದ ಕೆಂಪಗಾದೆ. ದೊಡ್ಡ ವಯಸ್ಸಿನ ಹುಡುಗಿಯರು ಮತ್ತು ಮಹಿಳೆಯರು ಬ್ರಾ ತೊಡುತ್ತಾರೆ ಎಂಬುದಂತೂ ನನಗೆ ತಿಳಿದಿತ್ತು. ನನ್ನ ಗೆಳತಿಯರು ಈ ಬಗ್ಗೆ ಮಾತನಾಡಿಕೊಳ್ಳುತ್ತಿದ್ದರು.

‘ನಿನಗೆ ತಿಂಗಳಾಗುತ್ತ?’ ಸೋದರತ್ತೆ ಕೇಳಿದರು.

‘ತಿಂಗ್ಳು?’ ನನಗೆ ಅರ್ಥವಾಗಲಿಲ್ಲ. ಈ ಬಗ್ಗೆ ನನ್ನ ಗೆಳತಿಯರು ನಾನಾ ವಿಧದಲ್ಲಿ